OS No.118/2010 DW.1

ಅಸಲು ದಾವೆ ಸಂಖ್ಯೆ - 118/2010

ಡಿಡಬ್ಲ್ಯೂ - 01

ದಿನಾಂಕ: 01-10-2024

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ.ಎಂ.ಎಸ್.ಬಿ ವಕೀಲರಿಂದ</u>

ನಿಮ್ಮ ಹೆಂಡತಿ ಹೂಡಿದ ದಾವೆಯಲ್ಲಿ ಅಂದರೆ ಅಸಲು ದಾವೆ ಸಂಖ್ಯೆ 171/1984 ರಲ್ಲಿ ನಿಮ್ಮ ಅತ್ತೆಯನ್ನು ಅಂದರೆ ನಿಮ್ಮ ಹೆಂಡತಿಯ ತಾಯಿಯನ್ನು ಉದ್ದೇಶಪೂರ್ವಕವಾಗಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಪದವೀಧರನಾಗಿರುತ್ತೇನೆ. ಮೊದಲು ಕನ್ನಡ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿ ನಂತರ ಇಂಗ್ಲೀಷ್ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ಸಾಕ್ಷಿಗೆ ನಿಪಿ.94 ಅನ್ನು ತೋರಿಸಿದ್ದು, ಅದರಲ್ಲಿ ವಾದಿಯು ತನ್ನ ಹೆಂಡತಿ ಇರುತ್ತಾರೆ ಎಂದು ನೋಡಿ ಗುರುತಿಸಿರುತ್ತಾರೆ. ಸದರಿ ದಾವೆಯಲ್ಲಿ ಒಬ್ಬರು ಮಾತ್ರ ವಾದಿ ಇದ್ದು, ಮೂರು ಜನ ಪ್ರತಿವಾದಿಗಳು ಇರುತ್ತಾರೆ. ಸದರಿ ಅಸಲು ದಾವೆ ಸಂಖ್ಯೆ 171/1984 ರಲ್ಲಿರುವ ವಾದಿಯ ತಾಯಿಯನ್ನು ಏನಾದರು ಪಕ್ಷಗಾರರನ್ನಾಗಿ ಮಾಡಿದ್ದೀರಾ ಎಂದರೆ ಮಾಡಿರುವುದಿಲ್ಲ.

ಸದರಿ ಅಸಲು ದಾವೆ ಸಂಖ್ಯೆ 171/1984 ರನ್ನು ನಿಮ್ಮ ಹೆಂಡತಿ ಹೂಡಿದ್ದು, ಅವರ ಪರವಾಗಿ ಮೊಕ್ತಿಯಾರನಾಮೆ ಪಡೆದು ನೀವು ದಾವೆಯನ್ನು ನಡೆಸಿರುತ್ತೀರಿ ಎಂದರೆ ಸಾಕ್ಷಿಯು ಸದರಿ ದಾವೆಯನ್ನು ನಾನು ನೆಡಸಿರುವುದಿಲ್ಲ ಎಂದು ನುಡಿಯುತ್ತಾರೆ. ಯಾವ ದಾವೆಯಲ್ಲಿ ನಿಮ್ಮ ಹೆಂಡತಿಯ ಪರವಾಗಿ ಮೊಕ್ತಿಯಾರನಾಮೆ ಪಡೆದು ದಾವೆಯನ್ನು ನಡೆಸಿರುತ್ತೀರಿ ಎಂದರೆ ಬಹಳ ದಾವೆಗಳು ಇರುತ್ತವೆ, ನನಗೆ ನೆನಪು ಇರುವುದಿಲ್ಲ. ನವಾಬರ ಆಸ್ತಿಯ ಪರವಾಗಿ ಒಟ್ಟು ಮೂರು ದಾವೆ ದಾಖಲಾಗಿದ್ದು, ನಿಮ್ಮ ಹೆಂಡತಿಯು ಅಸಲು ದಾವೆ ಸಂಖ್ಯೆ 171/1984 ಹೂಡಿದ್ದು, ಸಾರ್ವಜನಿಕ ಹಿತಾಸಕ್ತಿ ದಾವೆ ನಂಬರ 39/2001 ಮತ್ತು ಕೆ.ಎಸ್.ಆರ್.ಟಿ.ಸಿ ರವರು ಅಸಲು ದಾವೆ ಸಂಖ್ಯೆ 6/1999 ರನ್ನು ಹೂಡಿರುತ್ತಾರೆ ಎಂದರೆ ನನಗೆ ಯಾವುದು ನೆನಪು ಇರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

ಈ ದಾವೆಯಲ್ಲಿ ಸಾಕ್ಷಿ ಹೇಳುವ ಮುಂಚೆ ಈ ದಾವೆಯ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಮತ್ತು ಆಗುಹೋಗುಗಳನ್ನು ತಿಳಿದುಕೊಂಡು ಬಂದಿರುತ್ತೀರಿ ಎಂದರೆ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿರುವುದಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ನಿಮ್ಮ ಹೆಂಡತಿಯ ವಯಸ್ಸು ಎಷ್ಟು ಎಂದರೆ 79, ನನ್ನ ವಯಸ್ಸು 77 ಇರುತ್ತದೆ. ಈ ದಾವೆಯಲ್ಲಿ ನಿಮ್ಮ ಹೆಂಡತಿಯನ್ನು ಏನಾದರು ಸಾಕ್ಷಿದಾರರನ್ನಾಗಿ ಮಾಡಿಸುತ್ತೀರಾ ಎಂದರೆ ಮಾಡಿಸಲುಬಹುದು, ಮಾಡಿಸದೇ ಇರದೇ ಇರಬಹುದು. ನಿಮಗೆ ದಾವೆಯ ಹೆಚ್ಚು ವಿಷಯ ನೆನಪಿಲ್ಲ, ನಿಮ್ಮ

ಹೆಂಡತಿಗೆ ಹೆಚ್ಚು ವಿಷಯ ತಿಳಿದಿದೆ ಎಂದರೆ ನನಗೆ ನನ್ನ ಹೆಂಡತಿಗಿಂತ ಹೆಚ್ಚು ವಿಷಯ ತಿಳಿದಿದೆ. ಎಲ್ಲಾ ವಿಷಯದ ಆಗುಹೋಗುಗಳ ಬಗ್ಗೆ ನಿಮಗೆ ಮಾಹಿತಿ ಇದೆ ಎಂದರೆ ನಮಗಿಬ್ಬರಿಗು ಮಾಹಿತಿ ಇರುತ್ತದೆ. ನೀವು ಸಲ್ಲಿಸಿದ ನಿಮ್ಮ ಪ್ರತಿವಾದ ಪತ್ರದ ಪತ್ರದಲ್ಲಿ ಮಹಮ್ಮದ ಅಕ್ಬರಖಾನ ಬಿರಾದರ ನವಾಬರವರಿಗೆ ಸಾಹೇಬಖಾತು, ಶಹೆಜಾದಖಾತು, ಮಹೆಬೂಬಅಲಿ ಖಾನ್ ಬಿರಾದರ, ಮುನವರ್ ಖಾತು ಮತ್ತು ನವಾಜಖಾತುರವರು ಮಹಮ್ಮದ ಅಕ್ಬರಖಾನ್ ಬಿರಾದಾರ ರವರ ಮಕ್ಕಳು ಎಂದು ಒಂದೇ ಗೆರೆಯಲ್ಲಿ ತೋರಿಸಿರುತ್ತೀರಿ ಎಂದರೆ ಅವರು ಮಹಮ್ಮದ ಅಕ್ಬರಖಾನ್ ಬಿರಾದರರವರ ಖಾಸಾ ಮಕ್ಕಳು ಇರುತ್ತಾರೆ.

ನಿಮ್ಮ ಹಿಂದಿನ ವಿಚಾರಣೆಯಲ್ಲಿ ಮಹಮ್ಮದ ಅಕ್ಬರಖಾನ್ ಬಿರಾದರವರಿಗೆ ಇಬ್ಬರೂ ಹೆಂಡತಿಯರು ಎಂದು ಹೇಳಿದ್ದೀರಿ ಎಂದರೆ ಸರಿ. ನೀವು ಸಲ್ಲಿಸಿದ ಪ್ರತಿವಾದ ಪತ್ರದ ವಂಶಾವಳಿಯಲ್ಲಿ ಮಹಮ್ಮದ ಅಕ್ಬರ ಖಾನ್ ಬಿರಾದರರವರಿಗೆ ಇಬ್ಬರು ಹೆಂಡತಿಯರು ಎಂದು ತೋರಿಸಿರುವುದಿಲ್ಲ ಎಂದರೆ ಸರಿ. ಸದರಿ ವಂಶಾವಳಿಯಲ್ಲಿ ಯಾರು ಒಂದನೇ ಹೆಂಡತಿ ಮಕ್ಕಳು ಮತ್ತು ಯಾರು ಎರಡನೇ ಹೆಂಡತಿ ಮಕ್ಕಳು ಎಂದು ತೋರಿಸಿರುವುದಿಲ್ಲ ಎಂದರೆ ಸಾಕ್ಷಿಯು ದಾಖಲೆಯನ್ನು ನೋಡಿ ತೋರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಮಹೆಬೂಬಅಲಿಖಾನ್ ಬಿರಾದರ, ಮುನವರ್ ಖಾತು ಮತ್ತು ನವಾಜಖಾತುರವರು ಮಹಮ್ಮದ ಅಕ್ಬರಖಾನ್ ಬಿರಾದರರವರ ಎರಡನೇ ಹೆಂಡತಿ ಮಕ್ಕಳು ಎಂದು ಈ ಹಿಂದೆ ನೀವು ಹೇಳಿದ್ದೀರಿ ಎಂದರೆ ಹೇಳಿರುತ್ತೇನೆ. ಸಾಕ್ಷಿಗೆ ನ್ಯಾಯಾಲಯದಲ್ಲಿ ಲಭ್ಯವಿರುವ ವಂಶಾವಳಿಯನ್ನು ತೋರಿಸಿದ್ದು, ಅದರಲ್ಲಿ ಮಹಮ್ಮದ್ ಅಕ್ಬರಖಾನ್ ಬಿರಾದರರವರಿಗೆ ಇಬ್ಬರು ಹೆಂಡತಿಯರು ಇದ್ದು, ಅದರ ಉಲ್ಲೇಖ ಇರುತ್ತದೆ ಎಂದರೆ ಸಾಕ್ಷಿಯು ದಾಖಲೆಯನ್ನು ಪರಿಶೀಲಿಸಿ ಹೌದು ಎಂದು ನುಡಿದಿರುತ್ತಾರೆ. ಸದರಿ ದಾಖಲೆಯ ಮಹಮ್ಮದ ಅಕ್ಬರಖಾನ್ ರವರ ಎರಡನೆ ಹೆಂಡತಿಯ ವಂಶಾವಳಿಯ ಭಾಗವನ್ನು ನಿಪಿ 110 ಎಂದು ಗುರುತಿಸಲಾಯಿತು. ಮೊದಲನೇ ಹೆಂಡತಿಯ ಮಕ್ಕಳು ಸಾಹೇಬಖಾತು ಮತ್ತು ಶಹೆಜಾದಖಾತುರವರು ಇರುತ್ತಾರೆ ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯ ಭಾಗವಾದ ಮಹಮ್ಮದ ಅಕ್ಬರಖಾನ್ ರವರ 1ನೇ ಹೆಂಡತಿಯ ವಂಶಾವಳಿ ಭಾಗವನ್ನು ನಿಪಿ.110(ಎ) ಎಂದು ಗುರುತಿಸಲಾಯಿತು.

ಸಾಹೇಬಖಾತು ಮತ್ತು ಶಹೆಜಾದಖಾತುರವರು ಮಹೆಬೂಬಅಲಿ ಖಾನ್ ರವರಿಗೆ ಮಲತಾಯಿಯ ಮಕ್ಕಳು ಎಂದರೆ ಸಾಕ್ಷಿಯು ಅಕ್ಬರಖಾನ್‌ರವರ ಖಾಸಾ ಮಕ್ಕಳು ಇರುತ್ತಾರೆ

ಎಂದು ನುಡಿಯುತ್ತಾರೆ. ಒಬ್ಬ ತಂದೆ ಇದ್ದು, ಇಬ್ಬರು ತಾಯಂದಿರು ಇದ್ದರೆ ಏನೆಂದು ಕರೆಯುತ್ತೀರಿ ಎಂದರೆ ತಾಯಿ ಎಂದೆ ಕರೆಯುತ್ತೇವೆ. ಮಲತಾಯಿ ಎಂದು ಕರೆಯುತ್ತಾರೆ ಎಂದರೆ ಅದು ನನ್ನ ವಕೀಲರಿಗೆ ಗೊತ್ತಿರುತ್ತದೆ. ಮಹಮ್ಮದಿನರಲ್ಲು (Muslim Law) ಇದೇ ರೀತಿಯ ಮಲತಾಯಿ ಪದ್ಧತಿ ಇದ್ದರೂ ಸಹ ನನ್ನ ವಕೀಲರಿಗೆ ಗೊತ್ತು ಎಂಬ ಹಾರಿಕೆಯ ಉತ್ತರ ನೀಡುತ್ತಿದ್ದೀರಿ ಎಂದರೆ ಸರಿಯಲ್ಲ.

ಸಾಹೇಬಖಾತುರವರ ಇಬ್ಬರು ಮಕ್ಕಳ ಪೈಕಿ ಮೈಯೋಜುದ್ದೀನ್ ಖಾನ್‌ರವರ ಹೆಂಡತಿಯ ಬಗ್ಗೆ ನಿಮ್ಮ ಪ್ರತಿವಾದದ ವಂಶಾವಳಿಯಲ್ಲಿ ಎಲ್ಲೂ ಉಲೇಖ ಮಾಡಿರುವುದಿಲ್ಲ ಎಂದರೆ ಸರಿ. ಅಸಲು ದಾವೆ ಸಂಖ್ಯೆ 171/1984 ರಲ್ಲಿ ಮೈಯೋಜುದ್ದೀನ್ ಖಾನ್ ಬಿರಾದರ್ ರವರ ಹೆಂಡತಿಯ ಬಗ್ಗೆಯೂ ಸಹ ನೀವು ಉಲ್ಲೇಖ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಗೆ ನಿಪಿ.110 ಅನ್ನು ತೋರಿಸಿದ್ದು, ಅದರಲ್ಲಿ ಮೈಯೋಜುದ್ದೀನ್ ಖಾನ್ ಬಿರಾದರರವರಿಗೆ ಸಾಹೇಬಿ ಎಂಬ ಹೆಂಡತಿ ಇರುವ ಉಲ್ಲೇಖ ಇರುತ್ತದೆ ಎಂದರೆ ಸಾಕ್ಷಿಯು ನಿಪಿ.110 ಅನ್ನು ನೋಡಿ ಹೌದು ಎಂದು ನುಡಿಯುತ್ತಾರೆ. ಸದರಿ ಭಾಗವನ್ನು ನಿಪಿ.110(ಬಿ) ಎಂದು ಗುರುತಿಸಲಾಯಿತು.

ಅಸಲು ದಾವೆ ಸಂಖ್ಯೆ 171/1984 ರಲ್ಲಿ ಸಾಹೇಬಿರವರು ಜೀವಂತವಿದ್ದರೋ ಅಥವಾ ಮರಣ ಹೊಂದಿದ್ದರೋ ಎಂದು ನಿಮ್ಮ ವಂಶಾವಳಿಯಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿ ಮುಂದುವರೆದು ಅದು ನನಗೆ ಗೊತ್ತಿಲ್ಲ ನಮ್ಮ ವಕೀಲರಿಗೆ ಗೊತ್ತಿರುತ್ತದೆ. ಅಸಲು ದಾವೆ ಸಂಖ್ಯೆ 171/1984 ರನ್ನು ಹೂಡುವ ಕಾಲಕ್ಕೆ ಮತ್ತು ಈ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸುವ ಕಾಲಕ್ಕೆ ಸಾಹೇಬಿರವರು ಜೀವಂತ ಇದ್ದ ಬಗ್ಗೆ ಅಥವಾ ಸತ್ತ ಬಗ್ಗೆ ನಿಮ್ಮ ವಕೀಲರಿಗೆ ಮಾಹಿತಿ ನೀಡಿರುತ್ತೀರಾ ಎಂದರೆ ಸಾಕ್ಷಿಯು ಅಸಲು ದಾವಾ ಸಂಖ್ಯೆ 171/1984 ರಲ್ಲಿ ನನಗೆ ನೆನಪು ಇರುವುದಿಲ್ಲ ಮತ್ತು ಈ ಪ್ರಸ್ತುತ ದಾವೆಯಲ್ಲಿ ಮಾಹಿತಿಯನ್ನು ಕೊಟ್ಟಿರುವುದಿಲ್ಲ. ಸದರಿ ಸಾಹೇಬಿರವರ ಬಗ್ಗೆ ನಿಮ್ಮ ಪ್ರತಿವಾದ ಪತ್ರದಲ್ಲಿ ಎಲ್ಲಿಯೂ ಸಹ ಕಾಣಿಸಿರುವುದಿಲ್ಲ ಎಂದರೆ ನಮ್ಮ ವಕೀಲರಿಗೆ ಗೊತ್ತಿರುತ್ತದೆ.

ಅಸಲು ದಾವೆ ಸಂಖ್ಯೆ 6/1999 ರೊಳಗಡೆ ತಮ್ಮ ಸಾಕ್ಷಿ ಆಗಿರುತ್ತದೆ ಮತ್ತು ವಕೀಲರು ನಿಮ್ಮನ್ನು ಪಾಟೀ ಸವಾಲು ಮಾಡಿರುತ್ತಾರೆ ಎಂದರೆ ನನಗೆ ನೆನಪು ಇರುವುದಿಲ್ಲ. ಸದರಿ ದಾವೆಯಲ್ಲಿ ಸಾಕ್ಷಿಯನ್ನು ಕೊಟ್ಟಿರುತ್ತೀರೋ ಇಲ್ಲವೋ ಎಂದರೆ ಕೊಟ್ಟಿರಬಹುದು ಎಂದು

ನುಡಿಯುತ್ತಾರೆ. ಸಾಕ್ಷಿಗೆ ಅಸಲು ದಾವೆ ಸಂಖ್ಯೆ 6/1999 ರಲ್ಲಿ ಅವರ ಸಾಕ್ಷ್ಯ ಪ್ರಮಾಣ ಪತ್ರವನ್ನು ತೋರಿಸಿದ್ದು, ಸಾಕ್ಷಿಯು ನೋಡಿ ಸಾಕ್ಷಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ದಿಃ30-08-2005 ರಂದು ವಕೀಲರ ಪಾಟೀ ಸವಾಲಿಗೆ ನಿಮ್ಮನ್ನು ಒಳಪಡಿಸಿರುತ್ತಾರೆ ಎಂದು ಸಾಕ್ಷಿಗೆ ದಾಖಲೆಯನ್ನು ತೋರಿಸಿದ್ದು, ಅವರು ಒಳಪಡಿಸಿರಬಹುದು ಎಂದು ನುಡಿದಿರುತ್ತಾರೆ. ಸಾಕ್ಷಿಗೆ ದಿಃ30-08-2005 ರಂದು ತಾನು ಪಾಟೀ ಸವಾಲಿಗೆ ಒಳಪಟ್ಟಾಗ, ಪೇಜ್ ನಂಬರ 15 ರಲ್ಲಿ ನೀಡಿದ ಉತ್ತರವನ್ನು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿಯು ನೋಡಿ, ಓದಿರುತ್ತಾರೆ, ಸದರಿ ಭಾಗವನ್ನು ನಿಪಿ 111 ಎಂದು ಗುರುತಿಸಲಾಯಿತು.

ಅಸಲು ದಾವೆ ಸಂಖ್ಯೆ 6/1999 ರಲ್ಲಿ ಸಾಕ್ಷಿ ವಿಚಾರಣೆ ನೀಡಿದ ಬಳಿಕ ಸದರಿ ಪ್ರಸ್ತುತ ದಾವೆಯಲ್ಲಿ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೀರಿ ಎಂದರೆ ಸರಿ. ಸಾಕ್ಷಿಗೆ ನ್ಯಾಯಾಲಯದಲ್ಲಿ ಹಾಜರು ಇರುವ ವಂಶಾವಳಿಯನ್ನು ತೋರಿಸಿದ್ದು, ಅದರಲ್ಲಿ ತನ್ನ ಕುಟುಂಬದ, ತನ್ನ ದೊಡ್ಡಪ್ಪನ ಕುಟುಂಬದ ಮತ್ತು ತನ್ನ ಅತ್ತೆಯ ಕುಟುಂಬದ ಉಲ್ಲೇಖ ಇರುತ್ತದೆ ಎಂದರೆ ಸರಿ. ಸದರಿ ಕುಟುಂಬದವರ ಬಗ್ಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿ. ಸದರಿ ವಂಶಾವಳಿಯ ಭಾಗವನ್ನು ನಿಪಿ.110(ಸಿ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.